1 ನೇ ಹೆಚ್ಚುವರಿ ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಶಿರಸಿ.

ಸಿಸಿ.ನಂಬರ :1191/2020

ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂ:1

ಸತ್ಯಪ್ರತಿಜ್ಞೆಯ ಮೇರೆಗೆ : ದಿನಾಂಕ 07-11-2022

ಸಾಕ್ಷಿದಾರನ ಹೆಸರು : ಮಂಜುನಾಥ ನಾರಾಯಣ ದೇವಾಡಿಗ

ತಂದೆಯ ಹೆಸರು : ನಾರಾಯಣ ದೇವಾಡಿಗ

ವಯಸ್ಸು : 52 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ್ತವ್ಯ : ಕೆಳಗಿನಗುಡ್ಡದಮನೆ, ಶಿರಸಿ

ಮುಖ್ಯ ವಿಚಾರಣೆ : ಎ.ಪಿ.ಪಿ.ಯವರಿಂದ :

ನ್ಯಾಯಾಲಯದ ಮುಂದೆ ಇರುವ ಆರೋಪಿನ ಈ ಹಿಂದೆ ನೋಡಿಲ್ಲ . ಸಾಕ್ಷಿಗೆ ಎರಡು ದಾಖಲಗಳನ್ನು ತೋರಿಸಲಾಗಿ ಅವು ಪಂಚನಾಮೆ ಹಾಗೂ ಕಚ್ಚಾನಕಾಶೆಯಾಗಿದ್ದು ಅದರ ಮೇಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನಲ್ನು ಕ್ರಮವಾಗಿ ನಿ ..ಪಿ-1 ಮತುತ 2 ಎಂದು ಅದರ ಮೇಲಿರುವ ಸಹಿಗಳನ್ನು 1 ಎ ಮತ್ತು 2 ಎ ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಷಯಗಳು ನನಗೆಗೊತ್ತಿಲ್ಲ . ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ನುಡಿದಿದ್ದು ಅದನ್ನು ನಿ.ಪಿ-3 ಎಂದು ಗುರುತಿಸಲಾಯಿತು . ಅದನ್ನು ಯಾವಾಗ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ .

***(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದಾರೆಂದು ಮಾನ್ಯ ಸ ..ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.)***

ದಿನಾಂಕ 29-08-2019 ರಂದು ಪೋಲಿಸರು ನೀಡಿದ ನೋಟಿಸಿ ನ ಮೇರೆಗೆ ಶಿರಸಿಯಲ್ಲಿರುವ ಸಲಾಮತ ನಗರದಲ್ಲಿರುವ ಆರೋಪಿತನ ಮನೆಯಲ್ಲಿ ಅಕ್ರಮವಾಗಿ ಬಂದುಾಕನ್ನು ಇಟ್ಟುಕೊಂಡ ಬಗ್ಗೆ ಮಾಹಿತಿ ನೀಡಿದರು ಎಂದರೆ ಸರಿಯಲ್ಲ . ಆ ವಿಷಯಕ್ಕೆ ಸಂಬಂಧಿಸಿದಂತೆ ಶೋಧನಾ ವಾರಂಟನ್ನು ಪಡೆದುಕೊಂಡವಿಷಯ ತಿಳಿಸಿದರು ಎಂದರೆ ಸರಿಯಲ್ಲ . ನಿಮ್ಮನ್ನು ಮತ್ತು ಚಾ .ಸಾ-3 ರವರನ್ನು ಕರೆದುಕೊಂಡು ಹೋಗಿ ಆರೋಪಿತನ ಮನೆಯ ಹಿಂದಿನ ಕೋನೆಯಲ್ಲಿ ಕಬ್ಬಿಣದ ಕಪಾಟಿನ ಹಿಂದಿನ ಒಂದು ಬಂದೂಕನ್ನು ಜಪ್ತಿಪಡಿಕೊಂಡರು ಎಂದರೆ ಸರಿಯಲ್ಲ . ಅದೇ ದಿನ ಘಟನೆಗೆ ಸಂಬಂ,ಸಿದಂತೆ ನಿಮ್ಮ

ಮತ್ತು ಚಾ.ಸಾ–3 ರವರು ಸಮಕ್ಷಮ ಬಂದೂಕನ್ನು ಜಪ್ತುಪಡಿಸಿಕೊಂಡು ಪಂಚನಾಮೆ ಜರುಗಿಸಿದರು ಎಂದರೆ ಸರಿಯಲ್ಲ . ಅದೇ ಸಂದರ್ಭದಲ್ಲಿ ಘಟನಾ ಸ್ಥಳ ಕಚ್ಚಾನಕಾಶೆಯನ್ನು ಮತುತ ಭಾವಚಿತ್ರ ತೆಗೆದರು ಎಂದರೆ ಸರಿಯಲ್ಲ , ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಈಗ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

ಓ.ಹೆ.ಕೆ.ಸರಿ ಇದೆ.

1 ನೇ ಹೆಚ್ಚುವರಿ ಜೆ.ಎಂ.ಎಫ್.ಸಿ., ಶಿರಸಿ.